**ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ**
**(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)**

ಕ್ರ.ಸಂ. ಸ.ಕಾ.ನಿ.ಇಂ(ವಿ)/ಸ.ಲೆ.(ಕಂ)/ಹಿ.ಸ./ತು.ಕೆರೆ/1145

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ರವರ ಕಛೇರಿ
ವಾ.ಕಾರ್ಯ ಮತ್ತು ಪಾಲನಾ ಉಪ-ವಿಭಾಗ
ಬೆ.ವಿ.ಕಂ., ತುರುವೇಕೆರೆ ದಿನಾಂಕ : 09/06/2025

ಗೆ,

ಸಹಾಯಕ ನಿರ್ದೇಶಕರು (ಗ್ರೇಡ್-02),
ಸಮಾಜ ಕಲ್ಯಾಣ ಇಲಾಖೆ,
ತುರುವೇಕೆರೆ
ತುರುವೇಕೆರೆ ತಾಲ್ಲೂಕು,
ತುಮಕೂರು ಜಿಲ್ಲೆ.

ಮಾನ್ಯರೇ,

ವಿಷಯ:- MAEH-87 ಸ್ಥಾವರದ ಬಾಕಿ ಮೊತ್ತವನ್ನು ಪಾವತಿಸುವ ಬಗ್ಗೆ.
ಉಲ್ಲೇಖ:- ತಮ್ಮ ಕಛೇರಿ ಪತ್ರ ಸಂಖ್ಯೆ: ಸನಿ:ಸಕಇ:ವಿ.ನಿ:ಸಿಆರ್-/2025-26/ದಿ:03.06.2025.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ತುರುವೇಕೆರೆ ಉಪವಿಭಾಗದ ಮಾಯಸಂದ್ರ ಶಾಖೆಯ ಅಂಚಿಹಳ್ಳಿಯ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯದ ಆರ್.ಆರ್. ಸಂಖ್ಯೆ: MAEH-87 ಕ್ಕೆ ಬಾಕಿ ಇರುವ ಮೊತ್ತವನ್ನು ಲೆಕ್ಕಾಚಾರ ಮಾಡಲು ಉಲ್ಲೇಖಿತ ಪತ್ರದಲ್ಲಿ ತಾವು ತಿಳಿಸಿದ್ದರಿಂದ ಈ ಕಛೇರಿಯಿಂದ ಈ ಸ್ಥಾವರದ ಈ ಮಾಹೆಯವರೆಗೆ ವಿದ್ಯುತ್ ಬಾಕಿ ಮೊತ್ತವನ್ನು ಲೆಕ್ಕಾಚಾರ ಮಾಡಲಾಗಿದ್ದು, ರೂ.56541=00 ಗಳಾಗಿರುತ್ತದೆ.

ಈ ಸ್ಥಾವರವು ದಿ: 28.06.2014 ರಂದು ದೀರ್ಘಕಾಲಿಕ ವಿದ್ಯುತ್ ನಿಲುಗಡೆಯಾಗಿರುವುದರಿಂದ ಗಣಕೀಕೃತ ಬಿಲ್ ನೀಡಲು ಸಾಧ್ಯವಾಗಿರುವುದಿಲ್ಲ, ಆದ್ದರಿಂದ ಈ ಪತ್ರದಲ್ಲಿ ಲಗತ್ತಿಸಿರುವ ಲೆಕ್ಕಾಚಾರದ ಬಿಲ್ಲನ್ನೇ ವಿದ್ಯುತ್ ಬಾಕಿ ಬಿಲ್ಲು ಎಂದು ಪರಿಗಣಿಸುವುದು, ಈ ಬಾಕಿ ಮೊತ್ತವನ್ನು ಪಾವತಿಸಿದ್ದಲ್ಲಿ ಈ ಸ್ಥಾವರಕ್ಕೆ ವಿದ್ಯುತ್ ಮರುಸಂಪರ್ಕ ನೀಡಲಾಗುವುದು.

ತಮ್ಮ ವಿಶ್ವಾಸಿ

for
ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ)
ವಾ.ಕಾರ್ಯ ಮತ್ತು ಪಾಲನಾ ಉಪ-ವಿಭಾಗ
ಬೆ.ವಿ.ಕಂ ತುರುವೇಕೆರೆ.

Scanned with OKEN Scanner

# ಸಹಾಯಕ ನಿರ್ದೇಶಕರು(ಗ್ರೇಡ್-02)ರವರ ಕಛೇರಿ

## ಸಮಾಜ ಕಲ್ಯಾಣ ಇಲಾಖೆ ತುರುವೇಕೆರೆ ತಾಲ್ಲೂಕು ತುಮಕೂರು ಜಿಲ್ಲೆ

ಇ-ಮೇಲ್ ವಿಳಾಸ :tswo.tvk@rediffmail.com ದೂರವಾಣಿ ಸಂಖ್ಯೆ:-9480843206

**ಸಂಖ್ಯೆ:ಸನಿ:ಸಕಇ:ತುರು:ಆ.ಶಾಲೆ:ಸಿಆರ್: /2025-26** **ದಿನಾಂಕ: 10/06/2025.**

**ರವರಿಗೆ,**

ಶಾಖಾಧಿಕಾರಿಗಳು
ಬೆಸ್ಕಾಂ, ಮಾಯಸಂದ್ರ ಶಾಖೆ,
ಮಾಯಸಂದ್ರ ಹೋಬಳಿ,
ತುರುವೇಕೆರೆ ತಾಲ್ಲೂಕು.

**ಮಾನ್ಯರೇ,**

**ವಿಷಯ:-** ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ ಹಂಚಿಹಳ್ಳಿ ಇಲ್ಲಿಗೆ ಶೀಘ್ರವಾಗಿ ವಿದ್ಯುತ್ ಸಂಪರ್ಕ ಕಲ್ಪಿಸಿಕೊಡುವ ಬಗ್ಗೆ.

**ಉಲ್ಲೇಖ:-** ಸಹಾಯಕ ಕಾರ್ಯ ಪಾಲಕ ನಿರ್ವಾಹಕ ಇಂಜಿನಿಯರ್(ವಿ) ವಾ.ಕಾರ್ಯ ಮತ್ತು ಪಾಲನಾ ಉಪ-ವಿಭಾಗ ಬೆ.ವಿ.ಕಂ ತುರುವೇಕೆರೆ ರವರ ಮೌಖಿಕ ಸೂಚನೆಯ ದಿನಾಂಕ:-10/06/2025

*************

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ತುರುವೇಕೆರೆ ತಾಲ್ಲೂಕು ಮಾಯಸಂದ್ರ ಹೋಬಳಿ, ಹಂಚಿಹಳ್ಳಿ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ ಕಟ್ಟಡದಲ್ಲಿ ಶ್ರೀ ಮಹರ್ಷಿ ವಾಲ್ಮೀಕಿ ಆದಿವಾಸಿ ಬುಡಕಟ್ಟು ವಸತಿ ಶಾಲೆ ಹನುಮಾಪುರ ನಿಲಯವನ್ನು ಪ್ರಾರಂಭಿಸಲಾಗಿದೆ. ವಿದ್ಯಾರ್ಥಿ ನಿಲಯದ ವಿದ್ಯುತ್ ಸಂಪರ್ಕ ಪಡೆಯಲು R.R NO.-MAEH-87 ಇದು ದೀರ್ಘಕಾಲಿಕ ನಿಲುಗಡೆಯಾಗಿರುವುದರಿಂದ ರೂ.56,541/- ಬಾಕಿ ಮೊತ್ತವನ್ನು ಉಲ್ಲೇಖ ಪತ್ರದಲ್ಲಿ ಪಾವತಿಸಲು ಸಹಾಯಕ ಕಾರ್ಯ ಪಾಲಕ ನಿರ್ವಾಹಕ ಇಂಜಿನಿಯರ್(ವಿ) ವಾ.ಕಾರ್ಯ ಮತ್ತು ಪಾಲನಾ ಉಪ-ವಿಭಾಗ ಬೆ.ವಿ.ಕಂ ತುರುವೇಕೆರೆ ತಿಳಿಸಿರುತ್ತಾರೆ. ನಮ್ಮ ಇಲಾಖೆಯಿಂದ ಬಾಕಿ ಇರುವ ಮೊತ್ತವನ್ನು ಪಾವತಿಸಲು ಸಿದ್ಧರಿದ್ದು, ಆದರೆ ಖಜಾನೆ-2 ಮೂಲಕ ಪಾವತಿಸಲು ಮ್ಯಾಪಿಂಗ್ ಮಾಡಲು ಸಮಯ ಅವಕಾಶ ಬೇಕಾಗಿರುತ್ತದೆ. ಆದರೆ ಈಗಾಗಲೇ ಸದರಿ ನಿಲಯದಲ್ಲಿ ವಿದ್ಯಾರ್ಥಿಗಳು ಈಗಾಗಲೇ ವಾಸ್ತವ್ಯ ಇರುವುದರಿಂದ ಹಾಗೂ ಇದು ಸರ್ಕಾರಿ ವಿದ್ಯಾರ್ಥಿ ನಿಲಯವಾಗಿರುವುದರಿಂದ ವಿದ್ಯುತ್ ಸಂಪರ್ಕ ಮೂಲಭೂತ ಅವಶ್ಯಕವಾಗಿರುವುದರಿಂದ ತುರ್ತಾಗಿ ಸದರಿ ನಿಲಯಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸುವಂತೆ ಈ ಮೂಲಕ ತಮ್ಮಲ್ಲಿ ಕೋರಲಾಗಿದೆ ಹಾಗೂ ಮ್ಯಾಪಿಂಗ್ ಆದ ಕೂಡಲೇ ಬಾಕಿ ಮೊತ್ತವನ್ನು ಪಾವತಿಸಲಾಗುವುದು ಎಂಬ ಮಾಹಿತಿಯನ್ನು ತಮ್ಮ ಅವಗಾಹನೆಗಾಗಿ ಸಲ್ಲಿಸಿದೆ.

**ತಮ್ಮ ನಂಬುಗೆಯ**

**ಸಹಾಯಕ ನಿರ್ದೇಶಕರು(ಗ್ರೇಡ್-02)**
**ಸಮಾಜ ಕಲ್ಯಾಣ ಇಲಾಖೆ**
**ತುರುವೇಕೆರೆ**

Scanned with OKEN Scanner